# KARNATAKA LOKAYUKTA

No.UPLOK-2/DE/334/2018/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 29.03.2021.

## RECOMMENDATION

Sub:- Departmental inquiry against Sri Ramachandra, Surveyor, Taluk Office, Nelamangala Taluk, Bangalore Rural District- reg.

Ref:- 1) Government Order No.RD 292 LRS(3) 2017 Dated 10.04.2018.

2) Nomination order No. UPLOK-2/DE/334/2018 dated 10.07.2018 of Upalokayukta, State of Karnataka.

3) Inquiry report dated 26.03.2021 of Additional Registrar of Enquiries-14, Karnataka Lokayukta, Bengaluru.

~~~~~

The Government by its order dated 10.04.2018 initiated the disciplinary proceedings against Sri Ramachandra, Surveyor, Taluk Office, Nelamangala Taluk, Bangalore Rural District, [hereinafter referred to as Delinquent Government Official, for short as 'DGO'] and entrusted the departmental inquiry to this Institution.
~~~~~

2. This Institution by Nomination Order No. UPLOK-2/DE/334/2018 dated 10.07.2018 nominated Additional Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, by order dated 06.08.2018, Additional Registrar of Enquiries-14 was re-nominated as the Inquiry Officer to continue the said inquiry against DGO.

3. The DGO Sri Ramachandra, Surveyor, Taluk Office, Nelamangala Taluk, Bangalore Rural District, was tried for the following charges :-

> **"ಶ್ರೀ. ರಾಮಚಂದ್ರ ಆದ ನೀವು ಸರ್ವೆಯರ್, ತಾಲ್ಲೂಕು ಕಚೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲದ ಸರ್ವೆ ನಂ.216ರಲ್ಲಿ ರಾಜಕಾಲುವೆ 11 ಗಂಟೆ ಹಾದು ಹೋಗಿದ್ದು, ಜಮೀನಿನ ಮಾಲೀಕರಿಗೆ ಲೇಔಟ್ ನಿರ್ಮಾಣ ಮಾಡಲು ಸರ್ವೆ ಸ್ಕೆಚ್ ಮಾಡಿಕೊಡುವಾಗ ರಾಜಕಾಲುವೆಯನ್ನು ಸ್ಕೆಚ್‌ನಲ್ಲಿ ತೋರಿಸದೇ ಮಾಲೀಕರ ಜೊತೆಗೂಡಿ ನಿವೇಶನ ರಚಿಸಿ, ಮಾರಾಟ ಮಾಡಲು ಸಹಾಯ ಮಾಡಿ ಸರ್ಕಾರಕ್ಕೆ ವಂಚಿಸಿರುತ್ತೀರಿ.**
>
> ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ

ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ."

4. The Inquiry Officer (Additional Registrar of Enquiries-14) on proper appreciation of oral and documentary evidence has held that the charge against the DGO Sri Ramachandra, Surveyor, Taluk Office, Nelamangala Taluk, Bangalore Rural District, is 'proved'.

5. On reconsideration of report of enquiry and the materials on record, I do not find any reason to interfere with the findings recorded by the Enquiry officer. Therefore, it is hereby recommended to the Government to accept the report of Inquiry Officer.

6. As per the First Oral Statement of DGO recorded by the Enquiry Officer, the DGO Sri Ramachandra is due to retire from service on 29.02.2032.

7. Having regard to the nature of charge '*proved*' against the DGO and considering the totality of circumstances, it is hereby recommended to the Government to impose penalty

of ' withholding three (03) annual increments payable to DGO with cumulative effect.'

8. Action taken in the matter shall be intimated to this Authority.

Connected records are enclosed herewith.

30/3

**(JUSTICE B.S.PATIL)**
**Upalokayukta,**
**State of Karnataka.**

*BS**

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-334/2018/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 26/03/2021.

## ವಿಚಾರಣಾ ವರದಿ

ಉಪಸ್ಥಿತರು: **ಶ್ರೀಮತಿ ಕೆ.ಭಾಗ್ಯ,** ಅಪರ ನಿಬಂಧಕರು ವಿಚಾರಣೆಗಳು-14, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ **ಶ್ರೀ. ರಾಮಚಂದ್ರ,** ಸರ್ವೇಯರ್, ತಾಲ್ಲೂಕು ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/663/2017/ಸನಿಕಾಸ-2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 13/10/2017.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 292 ಭೂದಾಸೇ(3) 2017, ಬೆಂಗಳೂರು, ದಿನಾಂಕ: 10/04/2018.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/334/2018, ಬೆಂಗಳೂರು ದಿನಾಂಕ: 10/07/2018.
4. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಎನ್.ಜಿ ನಾಗರಾಜು** ಬಿನ್ ಲೇಟ್ ಗಂಗಯ್ಯ, ದೇವಾಂಗ ಬೀದಿ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು **ಶ್ರೀ. ರಾಮಚಂದ್ರ,** ಸರ್ವೇಯರ್, ತಾಲ್ಲೂಕು ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ಸಲ್ಲಿಸಿ, ನೆಲಮಂಗಲ ಗ್ರಾಮದಲ್ಲಿ ಇರುವ ಸದಾಶಿವನಗರ ಲೇಔಟ್‌ನ ಮಾಲೀಕರಾದಂತಹ ಶ್ರೀಮತಿ. ಅನ್ನಪೂರ್ಣಮ್ಮ ಎನ್ನುವವರಿಗೆ ಪ್ರಸ್ತುತ ಆ.ಸ.ನೌ.ರವರು ಸದರಿ ಸರ್ವೆ ನಂ.213ರಲ್ಲಿ ಇದ್ದಂತಹ ರಾಜಕಾಲುವೆಯನ್ನು ತೋರಿಸದೇ ನಕಾಶೆಯನ್ನು ಮಾಡಿಕೊಟ್ಟು

ಲೇಔಟ್‌ಗೆ ಅನುಮೋದನೆಯನ್ನು ಪಡೆಯಲು ಸಹಕರಿಸಿರುತ್ತಾರೆ. ಸದರಿ ಶ್ರೀಮತಿ. ಅನ್ನಪೂರ್ಣಮ್ಮನವರು ಲೇಔಟ್‌ನಲ್ಲಿ ಇದ್ದಂತಹ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ, ಆ.ಸ.ನೌ.ರವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೇಳಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 10/04/2018 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 10/07/2018 ರಂದು ಅಪರ ನಿಬಂಧಕರು, ವಿಚಾರಣೆಗಳು-7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 05/09/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ

2. ಶ್ರೀ. ರಾಮಚಂದ್ರ ಆದ ನೀವು ಸರ್ವೆಯರ್, ತಾಲ್ಲೂಕು ಕಚೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲದ ಸರ್ವೆ ನಂ.216ರಲ್ಲಿ ರಾಜಕಾಲುವೆ 11 ಗಂಟೆ ಹಾದು ಹೋಗಿದ್ದು, ಜಮೀನಿನ ಮಾಲೀಕರಿಗೆ ಲೇಔಟ್ ನಿರ್ಮಾಣ ಮಾಡಲು ಸರ್ವೆ ಸ್ಕೆಚ್ ಮಾಡಿಕೊಡುವಾಗ ರಾಜಕಾಲುವೆಯನ್ನು ಸ್ಕೆಚ್‌ನಲ್ಲಿ ತೋರಿಸದೇ ಮಾಲೀಕರ ಜೊತೆಗೂಡಿ ನಿವೇಶನ ರಚಿಸಿ, ಮಾರಾಟ ಮಾಡಲು ಸಹಾಯ ಮಾಡಿ ಸರ್ಕಾರಕ್ಕೆ ವಂಚಿಸಿರುತ್ತೀರಿ.

3. ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## ಅನುಬಂಧ–2

## ದೋಷಾರೋಪಣೆಯ ವಿವರ

### ಕಲಂ 12(3) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಅಡಿಯಲ್ಲಿ ಸಲ್ಲಿಸಿದ ವರದಿಯ ಯಥಾವತ್ತು ವಿವರಣೆಯಾಗಿರುತ್ತದೆ)

4. ಶ್ರೀ. ಎನ್.ಜಿ.ನಾಗರಾಜು, ನೆಲಮಂಗಲದ ನಿವಾಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.

ರಾಮಚಂದ್ರ, ತಾಲ್ಲೂಕು ಸರ್ವೆಯರ್, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

5. **ಪ್ರಕರಣದ ಸಂಕ್ಷಿಪ್ತ ಸಾರಾಂಶ:-** ದೂರುದಾರರು ತಮ್ಮ ದೂರಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲದ ಸರ್ವೆ ನಂ.216ರಲ್ಲಿ ರಾಜಕಾಲುವೆ 11 ಗುಂಟೆ ಹಾದುಹೋಗಿದ್ದು, ಆದರೆ ಎದುರುದಾರರು ಜಮೀನಿನ ಮಾಲೀಕರಿಗೆ ಲೇಔಟ್ ನಿರ್ಮಾಣ ಮಾಡಲು ಸರ್ವೆ ಸ್ಕೆಚ್ ಮಾಡಿಕೊಡುವಾಗ ರಾಜಕಾಲುವೆಯನ್ನು ಸ್ಕೆಚ್‌ನಲ್ಲಿ ತೋರಿಸದೆ ಮಾಲೀಕರ ಜೊತೆಗೂಡಿ ನಿವೇಶನ ರಚಿಸಿ ಮಾರಾಟ ಮಾಡಲು ಸಹಾಯ ಮಾಡಿ ಸರ್ಕಾರಕ್ಕೆ ವಂಚಿಸಿರುತ್ತಾರೆ ಎಂದು ಆಪಾದಿಸಿದ್ದರು.

6. **ದೂರಿನ ಮೇಲೆ ಆ.ಸ.ನೌರು ಆಕ್ಷೇಪಣೆಯನ್ನು ಕೋರಿ ನೋಟೀಸು ಕಳುಹಿಸಿದ್ದು, ಅವರು ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ಈ ಕಛೇರಿಯಿಂದ ನೆನಪೋಲೆ ಕಳುಹಿಸಿದ್ದು, ಆದಾಗ್ಯೂ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ದಿ: 4.10.2017ರಂದು ದೂರವಾಣಿ ಮೂಲಕ ಈ ಪ್ರಕರಣ ದಾಖಲಾದ ಬಗ್ಗೆ ಅವರ ಗಮನಕ್ಕೆ ತರಲಾಗಿ ಅವರು ಆಕ್ಷೇಪಣೆ ಸಲ್ಲಿಸಲು ಇನ್ನೂ ಕಾಲಾವಕಾಶ ಬೇಕೆಂದು ಕೋರಿರುತ್ತಾರೆ. ಈಗಾಗಲೇ ಆಕ್ಷೇಪಣೆ ಸಲ್ಲಿಸಲು ಅವರಿಗೆ ಸಾಕಷ್ಟು ಕಾಲಾವಕಾಶ ನೀಡಿರುವುದರಿಂದ ಎದುರುದಾರರ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗಿದೆ.**

7. ಪ್ರಕರಣದಲ್ಲಿ ಸರ್ವೆ ನಂ.213 ಕ್ಷೇತ್ರ 10.23 ಎಕರೆ ಜಮೀನಿನಲ್ಲಿ ವಸತಿ ವಿನ್ಯಾಸದ ನಕ್ಷೆ ಅನುಮೋದಿಸಿದ ಬಗ್ಗೆ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಇವರಿಂದ ವರದಿ ಪಡೆಯಲಾಗಿದ್ದು, ಅದರಲ್ಲಿ ಆ.ಸ.ನೌ.ರರು ತಾವು ತಯಾರಿಸಿದ ನಕ್ಷೆಯಲ್ಲಿ ಮತ್ತು ಟಿಪ್ಪಣಿ ನಕಲಿನಲ್ಲಿ ರಾಜಕಾಲುವೆಯನ್ನಾಗಲೀ ಅಥವಾ 11 ಗುಂಟೆ

ಕೊರಕಲು ಪ್ರದೇಶವನ್ನಾಗಲೀ ಗುರ್ತಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಗ್ರಾಮ ನಕ್ಷೆಯಲ್ಲಿ ಮತ್ತು ಟಿಪ್ಪಣಿ ನಕಲಿನಲ್ಲಿ ಕಾಲುವೆಯನ್ನು ಏಕರೇಖೆಯಲ್ಲಿ ಗುರ್ತಿಸಿದ್ದು, ರಾಜಕಾಲುವೆಯನ್ನು ದ್ವಿ-ರೇಖೆಯಲ್ಲಿ ಗುರ್ತಿಸಿರುವುದು ಕಂಡುಬಂದಿದೆಯೆಂದು ತಿಳಿಸಿರುತ್ತಾರೆ.

8. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

9. ದೂರುದಾರರು ಹಾಜರುಪಡಿಸಿರುವ ಗ್ರಾಮ ನಕ್ಷೆ, ಎದುರುದಾರರು ಸಿದ್ದಪಡಿಸಿರುವ ಜಮೀನಿನ ಅನುಮೋದಿತ ನಕ್ಷೆ, ಹಾಗೂ ಆಕಾರ್ ಬಂದನ್ನು ಪರಿಶೀಲಿಸಿದಾಗ ಸರ್ವೆ ನಂ.213ರಲ್ಲಿ 11 ಗುಂಟೆ ಕೊರಕಲು ಇರುವುದು ಕಂಡುಬರುತ್ತದೆ. ಆದರೆ ಆಪಾದಿತ ಸರ್ಕಾರಿ ನೌಕರರು ತಾವು ತಯಾರಿಸಿದ ಹಾಥ್ ನಕ್ಷೆಯಲ್ಲಿ ಕೊರಕಲು ಪ್ರದೇಶವನ್ನು ಗುರುತಿಸಿರುವುದಿಲ್ಲ. ಇದರಿಂದ ಕಂಡುಬರುವುದೇನೆಂದರೆ ಆ.ಸ.ನೌ.ರರು ಅಕ್ರಮವಾಗಿ ಹಾಗೂ ಕಾನೂನು ಬಾಹಿರವಾಗಿ ಇದ್ದ ವಸ್ತುಸ್ಥಿತಿಯನ್ನು ತೋರಿಸದೆ ಜಮೀನಿನ ಮಾಲೀಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ವಾಸ್ತವಾಂಶವನ್ನು ಮರೆಮಾಚಿದ್ದಾರೆಂದು ಕಂಡುಬರುತ್ತದೆ. ಆ.ಸ.ನೌ.ರರು ತಾವು ರಚಿಸಿದ ನಕ್ಷೆಯಲ್ಲಿ ಕೊರಕಲು ಪ್ರದೇಶ ತೋರಿಸದೇ ಇರುವುದರಿಂದ ಜಮೀನಿನ ಮಾಲೀಕರು ಸಂಪೂರ್ಣ 10.23 ಎಕರೆಯಲ್ಲಿ ನಿವೇಶನಗಳನ್ನು ತಯಾರಿಸಿ ಕ್ರಯಮಾಡಲು ಅನುಕೂಲ ಮಾಡಿಕೊಟ್ಟಿದ್ದಾರೆಂದು ಕಂಡುಬರುತ್ತದೆ. ಇದರಿಂದ ಸಾರ್ವಜನಿಕ ಉಪಯೋಗಕ್ಕಿರುವ ಕೊರಕಲು ಪ್ರದೇಶವು ಭೂಗಳ್ಳರ ಪಾಲಾಗಿದ್ದು, ಸುಲಭವಾಗಿ ನೀರು ಹರಿಯಲು ಅಡತಡೆಯುಂಟಾಗಿದೆಯೆಂದು ಕಂಡುಬರುತ್ತದೆ. ಆ.ಸ.ನೌ.ರು ಅಕ್ರಮವಾಗಿ ನಿಜಾಂಶವನ್ನು ಮರೆಮಾಚಿ ನಕ್ಷೆ ತಯಾರಿಸಿ ಕೊಟ್ಟಿರುವುದರಿಂದಲೇ ಅದರ ಆಧಾರದ ಮೇಲೆ ಬಡಾವಣೆ ನಿರ್ಮಾಣ ಮಾಡುವ ಮುಂದಿನ ಪ್ರಕ್ರಿಯೆಗಳು ಜರುಗಿದ್ದು, ಈ ಮೂಲಕ ಆ.ಸ.ನೌ.ರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

10. ದೂರುದಾರರು ಸಲ್ಲಿಸಿದ ದೂರು, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ ಆ.ಸ.ನೌ.ರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ ಆ.ಸ.ನೌ.ರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

11. ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆ.ಸ.ನೌ.ರು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು, 1966ರ ನಿಯಮ 3(1)(i) ರಿಂದ (iii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೂ ಸದರಿಯವರು ಈಗಾಗಲೇ ನಿವೃತ್ತರಾಗಿದ್ದ ಪಕ್ಷದಲ್ಲಿ ಕೆ.ಸಿ.ಎಸ್.ಆರ್. ನಿಯಮ 214(2)(ಬಿ) ಅಡಿಯಲ್ಲಿ ಅನುಮತಿ ನೀಡಿ ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಆ.ಸ.ನೌಕರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ, ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುದ್ಧ 14–ಎ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (1)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು (ವಿಚಾರಣೆಗಳು–14) ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ನಿಮ್ಮ ವಿರುದ್ಧ ಈ ಆಪಾದನೆ.**

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಸದರಿಯವರು ದಿನಾಂಕ: 05/10/2018 ರಂದು ಹಾಜರಾಗಿದ್ದು, ಸದರಿಯವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್‌ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರಿಂದ ರಕ್ಷಣಾ/ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಸದರಿಯವರಿಗೆ ಎಷ್ಟೇ ಕಾಲಾವಕಾಶವನ್ನು ನೀಡಿದರೂ ಸಹ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

7. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯು.1 ಎಂತಲು, ಜನವರಿ-2017 ರಿಂದ ಜನವರಿ-2019 ರವರೆಗೆ ನೆಲಮಂಗಲ ಯೋಜನಾ ಪ್ರಾಧಿಕಾರದಲ್ಲಿ ಸದಸ್ಯ-ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀಮತಿ. ಎನ್.ಹೆಚ್ ಸುಮಾ ರವರನ್ನು ಪಿ.ಡಬ್ಲ್ಯೂ-2 ಎಂತಲು, ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 9 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ.ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ. ತದನಂತರ, ಆ.ಸ.ನೌರವರು ಡಿ.ಡಬ್ಲ್ಯು.1 ಎಂದು ತಮ್ಮ ಸಾಕ್ಷ್ಯವನ್ನು ನಿ.ಡಿ.1 ರಿಂದ ನಿ.ಡಿ-4 ರವರೆಗಿನ ದಾಖಲಾತಿಗಳನ್ನು ತಮ್ಮ ಪರವಾಗಿ ಗುರುತುಪಡಿಸಿಕೊಂಡಿರುತ್ತಾರೆ (ನಿ.ಡಿ.1ನ್ನು ಪಿ.ಡಬ್ಲ್ಯೂ-2 ರವರ ಮೂಲಕ ಗುರುತುಪಡಿಸಿಕೊಂಡಿರುತ್ತಾರೆ).

8. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌರವರ ಪರ ಸಲ್ಲಿಸಿರುವ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

9. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

10. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

12. ಈ ಪ್ರಕರಣದಲ್ಲಿ ದೂರುದಾರರಾದ **ಶ್ರೀ. ಎನ್.ಜಿ ನಾಗರಾಜು** ಬಿನ್ ಲೇಟ್ ಗಂಗಯ್ಯ, ದೇವಾಂಗ ಬೀದಿ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು **ಶ್ರೀ. ರಾಮಚಂದ್ರ,** ಸರ್ವೇಯರ್, ತಾಲ್ಲೂಕು ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವಿರುದ್ಧ ಸಲ್ಲಿಸಿ, ನೆಲಮಂಗಲ ಗ್ರಾಮದಲ್ಲಿ ಇರುವ ಸದಾಶಿವನಗರ ಲೇಔಟ್‌ನ ಮಾಲೀಕರಾದಂತಹ ಶ್ರೀಮತಿ. ಅನ್ನಪೂರ್ಣಮ್ಮ ಎನ್ನುವವರಿಗೆ ಪ್ರಸ್ತುತ ಆ.ಸ.ನೌ.ರವರು ಸದರಿ ಸರ್ವೆ ನಂ.213ರಲ್ಲಿ ಇದ್ದಂತಹ ರಾಜಕಾಲುವೆಯನ್ನು ತೋರಿಸದೇ ನಕಾಶೆಯನ್ನು ಮಾಡಿಕೊಟ್ಟು ಲೇಔಟ್‌ಗೆ ಅನುಮೋದನೆಯನ್ನು ಪಡೆಯಲು ಸಹಕರಿಸಿರುತ್ತಾರೆ. ಸದರಿ ಶ್ರೀಮತಿ. ಅನ್ನಪೂರ್ಣಮ್ಮನವರು

ಲೇಔಟ್‌ನಲ್ಲಿ ಇದ್ದಂತಹ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ, ಆ.ಸ.ನೌ.ರವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೇಳಿರುತ್ತಾರೆ.

13. ಈ ಪ್ರಕರಣದಲ್ಲಿ ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ಎನ್.ಜಿ ನಾಗರಾಜು ಬಿನ್ ಗಂಗಯ್ಯ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷ್ಯ ನುಡಿಸಿಕೊಂಡಿರುತ್ತಾರೆ. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದೂರಿನಲ್ಲಿ ತಿಳಿಸಿರುವಂತೆ ನುಡಿದು, ಸರ್ವೆ ನಂ.213ರಲ್ಲಿ ಸರ್ಕಾರಿ ಕೊರಕಲು (ರಾಜಕಾಲುವೆ) 11 ಗುಂಟೆ ಹಾದುಹೋಗಿದ್ದು, ಅದನ್ನು ತೋರಿಸದೇ ನಕಾಶೆ ಮಾಡಿಕೊಟ್ಟು ಮಾಲೀಕರೊಂದಿಗೆ ಶಾಮೀಲಾಗಿ, ಲೇಔಟ್ ನಿರ್ಮಾಣ ಮಾಡಲು ಸಹಾಯ ಮಾಡಿದ ಆ.ಸ.ನೌ.ರವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನುಡಿದಿರುತ್ತಾರೆ.

14. ದೂರುದಾರರು ನೀಡಿದ ದೂರನ್ನು ನಿ.ಪಿ.1 ಎಂತಲೂ, ನಮೂನೆ–1 ಮತ್ತು 2ನ್ನು ಅನುಕ್ರಮವಾಗಿ ನಿ.ಪಿ.2 ಮತ್ತು 3 ಎಂತಲೂ, ಸರ್ವೆ ನಂ.213ಕ್ಕೆ ಸಂಭಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳು ಒಟ್ಟು 21 ಪುಟಗಳಲ್ಲಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.4 ಎಂತಲೂ, ರಾಜಕಾಲುವೆ ಮೇಲೆ ಮನೆ ಕಟ್ಟಿರುವ ಬಗ್ಗೆ 5 ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.5 ಎಂತಲೂ, ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ನೆಲಮಂಗಲ ತಾಲ್ಲೂಕು ರವರು 'ಸರ್ವೆ ನಂ.213/2 ರ ಆಕಾರಬಂದಿನಲ್ಲಿ ತಾಂತ್ರಿಕ ನ್ಯೂನ್ಯತೆ ಇರುವುದು ಕಂಡುಬಂದಿದ್ದು, ಅದನ್ನು ನೀಡಲು ಬರುವುದಿಲ್ಲ' ಎಂದು ನೀಡಿರುವ ಹಿಂಬರಹವನ್ನು ನಿ.ಪಿ.6 ಎಂತಲೂ, ಸದರಿ ಸರ್ವೆ ನಂಬರ್‌ನ ಪಹಣಿ ತಖ್ತೆ ನಿ.ಪಿ.7 ಎಂತಲೂ, ರೀ–ಸರ್ವೆ ಆದ ನಂತರದ ನಕಾಶೆಯನ್ನು ನಿ.ಪಿ.8 ಎಂತಲೂ, ಪಿ.ಡಬ್ಲ್ಯೂ.2 ರವರು ಈ ಸಂಸ್ಥೆಗೆ ನೀಡಿರುವ ವರದಿಯನ್ನು ನಿ.ಪಿ.9 ಎಂತಲೂ ಗುರುತುಪಡಿಸಿಕೊಳ್ಳಲಾಗಿದೆ.

15. ದೂರುದಾರರು ತಮ್ಮ ಪಾಟಿಸವಾಲಿನಲ್ಲಿ, ಆ.ಸ.ನೌ.ರವರು 2015 ರಿಂದಲೂ ನೆಲಮಂಗಲ ತಾಲ್ಲೂಕು ಸರ್ವೆಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು, ತಾನು ಸರ್ವೆ ನಂ.213ರ ಪಕ್ಕದ ಸರ್ವೆ ನಂಬರ್‌ನಲ್ಲಿ ವಾಸ ಮಾಡುತ್ತಿದ್ದು, ಅದು ತನ್ನ ಸ್ವಂತ ಊರಾಗಿದ್ದು, ಹುಟ್ಟಿನಿಂದ ಅಲ್ಲೇ ವಾಸ ಮಾಡುತ್ತಿದ್ದೇನೆ ಎಂದಿದ್ದಾರೆ.

16. ದೂರುದಾರರು ತಮ್ಮ ಮುಂದಿನ ಪಾಟಿಸವಾಲಿನಲ್ಲಿ ಸರ್ವೆ ನಂ.213ಕ್ಕೆ ಸಂಬಂಧಪಟ್ಟ ಆಕಾರಬಂದನ್ನು ಹಾಜರುಪಡಿಸಿರುವುದಿಲ್ಲ ಎಂದು ತಿಳಿಸಿ, ಈ ಬಗ್ಗೆ ದಾಖಲಾತಿಯನ್ನು ಕೋರಿ ಅರ್ಜಿ ಸಲ್ಲಿಸಿದಾಗ, 'ಸರ್ವೆ ನಂ.213/2 ರ ಆಕಾರಬಂದಿನಲ್ಲಿ ತಾಂತ್ರಿಕ ನ್ಯೂನ್ಯತೆ ಇರುವುದು ಕಂಡುಬಂದಿದ್ದು, ಅದನ್ನು ನೀಡಲು ಬರುವುದಿಲ್ಲ' ಎಂದು ಹಿಂಬರಹವನ್ನು ನೀಡಿರುತ್ತಾರೆ, ಸದರಿ ಹಿಂಬರಹವನ್ನು ಹಾಜರುಪಡಿಸಿರುತ್ತಾರೆ. ಅದನ್ನು ನಿ.ಪಿ.6 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಅಲ್ಲದೇ, ಸದರಿ ಲೇಔಟ್ ಮಾಡುವ ಮುಂಚೆ ಆ ರಾಜಕಾಲುವೆ ಇರಲಿಲ್ಲ ಎನ್ನುವುದು ಸರಿಯಲ್ಲ ಎಂದಿದ್ದಾರೆ.

17. ಪ್ರಸ್ತುತ ದೂರಿನ ಆಪಾದನೆಗೆ ಕುರಿತಂತೆ ಅಂದಿನ ನೆಲಮಂಗಲ ಯೋಜನಾ ಪ್ರಾಧಿಕಾರದಲ್ಲಿ ಸದಸ್ಯ-ಕಾರ್ಯದರ್ಶಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀಮತಿ. ಎನ್.ಹೆಚ್ ಸುಮಾ ರವರನ್ನು ತನಿಖಾಧಿಕಾರಿಯಾಗಿ ನೇಮಿಸಿದ್ದು, ಅವರು ಕಡತಗಳನ್ನು ಪಡೆದು ಪರಿಶೀಲಿಸಿ, ತಮ್ಮ ವರದಿಯನ್ನು ಈ ಸಂಸ್ಥೆಗೆ ನೀಡಿರುತ್ತಾರೆ. ಸದರಿ ವರದಿಯನ್ನು ನಿ.ಪಿ.9 ಎಂದು ಗುರುತುಪಡಿಸಿಕೊಳ್ಳಲಾಗಿದೆ. ವರದಿಯಲ್ಲಿನ ಉಲ್ಲೇಖ ಈ ಕೆಳಕಂಡಂತಿದೆ:

> **"ಸದರಿ ದೂರಿಗೆ ಸಂಬಂಧಿಸಿದಂತೆ, ಪರಿಶೀಲಿಸಲಾಗಿ ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ನೆಲಮಂಗಲ ಗ್ರಾಮದ ಸ.ನಂ.213 ರಲ್ಲಿ 10 ಎಕರೆ 23 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದಿಸಿ ನೀಡಲು ಅರ್ಜಿದಾರರ ಕೋರಿಕೆಯಂತೆ ವಿನ್ಯಾಸ ನಕ್ಷೆಯನ್ನು ಅನುಮೋದಿಸಲಾಗಿರುತ್ತದೆ. ಸದರಿ ವಿನ್ಯಾಸ ನಕ್ಷೆಯ ಸರಹದ್ದುಗಳು, ದಾಖಲೆಯಂತೆ ಸರಿ ಹೊಂದುತ್ತದೆಯೇ ಹಾಗೂ ವಿನ್ಯಾಸ ನಕ್ಷೆಯಲ್ಲಿನ ಉದ್ಯಾನವನ, ನಾಗರೀಕ ಸೌಲಭ್ಯ ನಿವೇಶನಗಳ**

ಅಳತೆ ಮತ್ತು ಸ್ಥಳ ನಿಶ್ಚಯವು ನಿಖರವಾಗಿದೆಯೇ ಎಂಬುದನ್ನು ವಿನ್ಯಾಸ ನಕ್ಷೆಯೊಂದಿಗೆ ದೃಢೀಕರಿಸಲು ತಹಶೀಲ್ದಾರ್, ನೆಲಮಂಗಲ ತಾಲ್ಲೂಕು ಇವರನ್ನು ಕೋರಲಾಗಿದ್ದು, ಸದರಿಯವರು ನೀಡಿರುವ ದೃಢೀಕೃತ ನಕ್ಷೆಯಂತೆಯೇ ವಿನ್ಯಾಸ ನಕ್ಷೆಯನ್ನು ಈ ಕಛೇರಿಯಿಂದ ಅನುಮೋದಿಸಲಾಗಿರುತ್ತದೆ. ಸದರಿ ವಿನ್ಯಾಸ ನಕ್ಷೆಯಲ್ಲಿ ಯಾವುದೇ ರಾಜಕಾಲುವೆ ಗುರುತಿಸಿರುವುದಿಲ್ಲ.

ಅರ್ಜಿದಾರರ ದಿನಾಂಕ: 01/07/2006 ಮತ್ತು 02/07/2007 ರ ಕೋರಿಕೆಯಂತೆ ಸದರಿ ಅನುಮೋದಿತ ವಿನ್ಯಾಸವನ್ನು ಈ ಪ್ರಾಧಿಕಾರದ ಪತ್ರದನ್ವಯ ಮಾರ್ಪಡಿಸಿದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ ಹಾಗೂ ಸದರಿ ಮಾರ್ಪಾಡಿಸಿದ ವಿನ್ಯಾಸ ನಕ್ಷೆಯನ್ನು ಸಹ ತಹಶೀಲ್ದಾರ್‌ರವರಿಂದ ದೃಢೀಕರಿಸಿಕೊಂಡು ಅನುಮೋದನೆ ನೀಡಲಾಗಿರುತ್ತದೆ. ಸದರಿ ಮಾರ್ಪಡಿಸಿದ ವಿನ್ಯಾಸ ನಕ್ಷೆಯಲ್ಲೂ ಸಹ ರಾಜಕಾಲುವೆ ಗುರುತಿಸಿರುವುದಿಲ್ಲ.

ಸದರಿ ಪ್ರಕರಣದ ಕುರಿತು ಕಡತವನ್ನು ಪರಿಶೀಲಿಸಲಾಗಿ, ಸದರಿ ಗ್ರಾಮದ ಗ್ರಾಮ ನಕ್ಷೆಯಲ್ಲಿ ಮತ್ತು ಟಿಪ್ಪಣಿ ನಕಲಿನಲ್ಲಿ ಕಾಲುವೆಯನ್ನು ಗುರುತಿಸಿದ್ದು, (ಏಕರೇಖೆ–**Single Line**) ಸರ್ವೆ ನಂಬರ್ ಆಕಾರ ಬಂದಿನಲ್ಲಿ ರಾಜಕಾಲುವೆ (ಎರಡು ರೇಖೆ–**Double Line**) ಇರುವುದು ಕಂಡು ಬಂದಿದೆ".

18. ಪಿ.ಡಬ್ಲ್ಯೂ.2 ರವರು ಮುಖ್ಯ ವಿಚಾರಣೆಯಲ್ಲಿನ ಹೇಳಿಕೆ ಮತ್ತು ಸದರಿಯವರು ನೀಡಿದ ವರದಿಯನ್ನು ಆಧರಿಸಿ, ಅವರನ್ನು ಪಾಟಿಸವಾಲುಗೊಳಿಸಿದಾಗ, "30–11–2001ರ ಪ್ರಾರಂಭಿಕ ಪ್ರಮಾಣ ಪತ್ರದಲ್ಲಿ ಮತ್ತು 2001ರ ಅನುಮೋದಿತ ವಿನ್ಯಾಸ ನಕ್ಷೆಯಲ್ಲಿ ರಾಜಕಾಲುವೆಯನ್ನು ಗುರುತಿಸಿರುವುದಿಲ್ಲ ಎನ್ನುವುದು ಸರಿ...... 2001 ಹಾಗೂ 2007ರಂದು ತಹಶೀಲ್ದಾರರು ದೃಢೀಕರಿಸಿ ನೀಡಿರುವ ಸರ್ವೇ ನಕ್ಷೆಗಳಲ್ಲಿ ರಾಜಕಾಲುವೆಗಳನ್ನು ಗುರುತಿಸಿರುವುದಿಲ್ಲ ಎನ್ನುವುದು ಸರಿ." ಸದರಿಯವರ ಹೇಳಿಕೆಯಂತೆ 2001 ಮತ್ತು 2007ರ ನಕ್ಷೆಗಳಲ್ಲಿ ರಾಜಕಾಲುವೆಯನ್ನು ಗುರುತಿಸಿರುವುದಿಲ್ಲ ಎಂದಾಯಿತು. ಈ ಬಗ್ಗೆ ಆಸನೌರವರೂ ಸಹಾ ತಮ್ಮ ಸಾಕ್ಷ್ಯ

ವಿಚಾರಣೆಯನ್ನು ಮಾಡಿಕೊಂಡು ಮೂರು ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆಸನೌರವರ ಪ್ರತಿವಾದವೇನೆಂದರೆ, '1999ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಸರ್ವೆ ನಂ.213ರಲ್ಲಿ 10ಎಕರೆ 23ಗುಂಟೆ ಭೂಪರಿವರ್ತನೆ ಮಾಡುವ ಸಮಯದಲ್ಲಿ ಖರಾಬು ಪ್ರದೇಶವನ್ನು ಕಿಮ್ಮತ್ತಿನ ಆಧಾರದ ಮೇಲೆ ಐನ್ ಪ್ರದೇಶ (ವ್ಯವಸಾಯಕ್ಕೆ ಯೋಗ್ಯ) ಎಂದು ಮಾಡಿರುವುದರಿಂದ ನಾನು ಕೊಟ್ಟಂತಹ ನಕ್ಷೆಯಲ್ಲಿ ರಾಜಕಾಲುವೆಯನ್ನು ತೋರಿಸಲು ಬರುತ್ತಿರಲಿಲ್ಲ. ಆದ್ದರಿಂದ ನಾನು ರಾಜಕಾಲುವೆಯನ್ನು ನಕ್ಷೆಯಲ್ಲಿ ತೋರಿಸಿರುವುದಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳು ಮಾಡಿದ ಭೂಪರಿವರ್ತನಾ ಆದೇಶವನ್ನು ಹಾಜರುಪಡಿಸುತ್ತಿದ್ದೇನೆ.' ಪ್ರಸ್ತುತ ಆಸನೌ ನೆಲಮಂಗಲ ತಾಲ್ಲೂಕು ಸರ್ವೆಯರ್ ಆಗಿ 2007 ರಿಂದ ದಿ:8-2-2021ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರಾಗಿದ್ದಾರೆ. ಸರ್ವೆ ನಂ.213ಕ್ಕೆ ಸಂಬಂಧಪಟ್ಟಂತೆ 2001ರಲ್ಲಿ ಅನುಮೋದಿತ ವಿನ್ಯಾಸ ನಕ್ಷೆ ತಯಾರಾಗಿದ್ದು, ಪುನ: ಅರ್ಜಿದಾರರಾದ ಅನ್ನಪೂರ್ಣಮ್ಮನವರ ಕೋರಿಕೆಯ ಮೇರೆಗೆ ದಿ:1-8-2007 ರಂದು ಮಾರ್ಪಾಡಿತ ವಸತಿ ವಿನ್ಯಾಸ ನಕ್ಷೆ (modified residential layout plan) ಅನುಮೋದನೆಯಾಗಿರುತ್ತದೆ. ಪಿಡಬ್ಲ್ಯೂ-2 ರವರು ತಮ್ಮ ಪಾಟೀ ಸವಾಲಿನಲ್ಲಿ 2001 ಹಾಗೂ 2007ರಂದು ತಹಶೀಲ್ದಾರರು ದೃಢೀಕರಿಸಿ ನೀಡಿದ ಸರ್ವೆ ನಕ್ಷೆಗಳಲ್ಲಿ ರಾಜಕಾಲುವೆಯನ್ನು ಗುರುತಿಸಿರುವುದಿಲ್ಲ ಎನ್ನುವುದನ್ನು ಒಪ್ಪಿರುತ್ತಾರೆ. ಆಸನೌರವರು ಹಾಜರುಪಡಿಸಿರುವ ದಿ:4-8-1999ರ ಭೂಪರಿವರ್ತನಾ ಆದೇಶವನ್ನು ಪರಿಶೀಲಿಸಲಾಗಿ ಅದರಲ್ಲಿರುವ 6ನೇ ಷರತ್ತು ಈ ಕೆಳಕಂಡಂತಿದೆ:

> "ಈ ಜಮೀನಿಗೆ ತಾಕು ಪೋಟ್ ಖರಾಬ್ ಜಮೀನಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ67ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು, ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸ.ನಂ.213ರಲ್ಲಿನ 'ಎ' ಖರಾಬ್ ವಿಸ್ತೀರ್ಣ 0.17 ಮಾರುಕಟ್ಟೆ ದರ ಮತ್ತು ಭೂ ಪರಿವರ್ತನೆ ಶುಲ್ಕ ರೂ.239750 ಪಾವತಿಸಿಕೊಳ್ಳಲಾಗಿದ್ದು ವಾಸದ ಉದ್ದೇಶಕ್ಕಾಗಿ ಬಳಸಲು ಭೂ ಪರಿವರ್ತನೆ ನೀಡಿದೆ ಹಾಗೂ ------ ವಿಸ್ತೀರ್ಣ 'ಬಿ' ಖರಾಬಿನಲ್ಲಿ ಬರುವ ಕಾರಣ ಇದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ

ಹಕ್ಕು ಇರುವುದಿಲ್ಲ. ಈ 'ಬಿ' ಖರಾಬಿನ ವಿಸ್ತೀರ್ಣ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರ್‌ರವರು ಈ ಬಾಬ್ತು ಆರ್‌ಟಿಸಿ ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು."

19. ಪಿ.ಡಬ್ಲ್ಯೂ-2ರವರು ಹಾಜರುಪಡಿಸಿರುವ 1964-65ನೇ ಸಾಲಿನ ಪಹಣಿ ತ:ಖ್ತೆಯನ್ನು ನಿ.ಪಿ.7ಎಂದು ಗುರುತುಪಡಿಸಿಕೊಳ್ಳಲಾಗಿದ್ದು, ಅದನ್ನು ಪರಿಶೀಲಿಸಲಾಗಿ, ಸರ್ವೆ ನಂ.213ರಲ್ಲಿ 35 ಗುಂಟೆ ಪೂಟ್ ಖರಾಬ್ ಇರುವ ಬಗ್ಗೆ ನಮೂದಾಗಿದೆ. ಮೇಲ್ಕಂಡ ಆದೇಶವನ್ನು ಗಮನಿಸಲಾಗಿ, 'ಬಿ' ಖರಾಬಿನಲ್ಲಿ ಬರುವ ಜಮೀನಿನ ವಿಸ್ತೀರ್ಣ ನಮೂದಿಸಿಲ್ಲ, ಖಾಲಿ ಬಿಡಲಾಗಿದೆ. ಆದ್ದರಿಂದ, ಆ.ಸ.ನೌ.ರವರು ಹೇಳಿರುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಸರ್ವೆ ನಂ.213ರಲ್ಲಿ 10 ಎಕರೆ 23 ಗುಂಟೆ ಭೂಪರಿರ್ತನೆ ಮಾಡುವ ಸಮಯದಲ್ಲಿ ಖರಾಬು ಪ್ರದೇಶವನ್ನು ಕಿಮ್ಮತ್ತಿನ ಆಧಾರದ ಮೇಲೆ ಐನ್ ಪ್ರದೇಶ (ವ್ಯವಸಾಯಕ್ಕೆ ಯೋಗ್ಯ) ಮಾಡಿರುವುದರಿಂದ ನಾನು ಕೊಟ್ಟಿರುವ ನಕ್ಷೆಯಲ್ಲಿ ರಾಜಕಾಲುವೆಯನ್ನು ತೋರಿಸಲು ಬರುತ್ತಿರಲಿಲ್ಲ ಎನ್ನುವ ಪ್ರತಿವಾದವನ್ನು ಒಪ್ಪಲು ಬರುವುದಿಲ್ಲ. ಏಕೆಂದರೆ, ಮಾನ್ಯ ಜಿಲ್ಲಾಧಿಕಾರಿಗಳ ಆದೇಶವನ್ನು ಪರಿಶೀಲಿಸಲಾಗಿ, 0.17 ಖರಾಬು ವಿಸ್ತೀರ್ಣಕ್ಕೆ ಮಾತ್ರ ಪರಿವರ್ತನಾ ಶುಲ್ಕವನ್ನು ಪಾವತಿಸಿಕೊಳ್ಳಲಾಗಿದೆ. 'ಬಿ' ಖರಾಬನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ ಎಂದಿದೆ. ಆದರೆ, 'ಬಿ' ಖರಾಬಿನ ವಿಸ್ತೀರ್ಣವನ್ನು ಖಾಲಿ ಬಿಡಲಾಗಿದೆ. ಹೀಗಾಗಿ, ಇದ್ದಂತಹ ಪೂರ್ತಿ 'ಬಿ' ಖರಾಬಿನ ಪ್ರದೇಶವನ್ನು ಐನ್ ಮಾಡಲಾಗಿದೆ, ಆದ್ದರಿಂದ ತಾನು ಕೊಟ್ಟಂತಹ ನಕ್ಷೆಯಲ್ಲಿ ರಾಜಕಾಲುವೆಯನ್ನು ತೋರಿಸಲು ಬರುತ್ತಿರಲಿಲ್ಲ ಎನ್ನುವ ಪ್ರತಿವಾದವನ್ನು ಒಪ್ಪಲು ಬರುವುದಿಲ್ಲ. ಅಲ್ಲದೇ, ಈ ಆ.ಸ.ನೌರವರು ತಮ್ಮ ಪಾಟಿಸವಾಲಿನಲ್ಲಿ "ನೆಲಮಂಗಲದ ಸರ್ವೇ ನಂ.213ರ 10ಎಕರೆ 23ಗುಂಟೆ ಸ್ವತ್ತನ್ನು ನಾನು ಅಳತೆ ಮಾಡಿದ್ದೆ ಎನ್ನುವುದು ಸರಿ. ಭೂಪರಿವರ್ತನೆ ಆದ ನಂತರ ನೆಲಮಂಗಲ ಯೋಜನಾ ಪ್ರಾಧಿಕಾರದವರು ವಿನ್ಯಾಸ ನಕ್ಷೆ ಅನುಮೋದನೆಗೆ ಗಡಿಗಳನ್ನು ಪರಿಶೀಲಿಸನೆ ಮಾಡಿ ಕೊಡಿ ಎಂದು ತಿಳಿಸಿದ್ದರು. ಆಗ ನಾನು ಹೋಗಿ ಅಳತೆ ಮಾಡಿ ವರದಿಯನ್ನು ತಹಶೀಲ್ದಾರರಿಗೆ ನೀಡಿದ್ದೆ. ಗ್ರಾಮ ನಕಾಶೆಯನ್ನು ಪರಿಶೀಲಿಸಿ ನಂತರ ಅದರಲ್ಲಿರುವ 'ಎ' ಖರಾಬು, 'ಬಿ' ಖರಾಬುಗಳನ್ನು ಗುರುತಿಸಿ

ನಾನು ವರದಿಯನ್ನು ತಹಶೀಲ್ದಾರರಿಗೆ ಕೊಡಬೇಕಾಗಿತ್ತು ಎನ್ನುವುದು ಸರಿ. ಸಾಕ್ಷಿ ಸ್ವತ: ನುಡಿಯುತ್ತಾರೆ, ಈ ಹಿಂದೆ 1999–2000ದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಎಎಲ್ಎಲ್‌ನೇ ಎಸ್‌ಆರ್ 21/ 99–2000ದಲ್ಲಿ ಖರಾಬನ್ನು ಸೇರಿ ಐನ್ ಆಗಿ ಪರಿವರ್ತನೆ ಮಾಡಿರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಕರ್ತವ್ಯ ನಿರ್ವಹಿಸಿರುತ್ತೇನೆ ಎನ್ನುತ್ತಾರೆ..... ಗ್ರಾಮ ನಕಾಶೆಯಂತೆ ಸರ್ವೇ ನಂ.213ರಲ್ಲಿ ರಾಜಕಾಲುವೆ ಹಾದುಹೋಗಿದೆ ಎಂದು ಮಾಡಿದ ಸಲಹೆಗೆ ಸಾಕ್ಷಿ, ದಾಖಲಾತಿಯಲ್ಲಿ 'ಕೊರಕಲು' ಎಂದಿದೆ ಎನ್ನುತ್ತಾರೆ. ಮುಂದುವರೆದು, ಮಾನ್ಯ ಜಿಲ್ಲಾಧಿಕಾರಿಗಳು ಭೂಪರಿವರ್ತನೆ ಸಮಯದಲ್ಲಿ ಖರಾಬು ಪ್ರದೇಶವನ್ನು ಐನ್ ಮಾಡಿರುವುದರಿಂದ ನಾನು 2006–07ನೇ ಸಾಲಿನಲ್ಲಿ ತಯಾರಿಸಿದ ನಕ್ಷೆಯಲ್ಲಿ ತೋರಿಸಲು ಬರುವುದಿಲ್ಲ ಎನ್ನುತ್ತಾರೆ. 'ರಾಜಕಾಲುವೆ', 'ಕೊರಕಲು' ಬಿ–ಖರಾಬಿನಲ್ಲಿ ಬರುತ್ತವೆ ಎನ್ನುವುದು ಸರಿ" ಎಂದು ನುಡಿದಿರುತ್ತಾರೆ. ಆ.ಸ.ನೌ.ರವರು 1999–2000ನೇ ಸಾಲಿನಲ್ಲಿ ಅಲ್ಲಿ ತಾಲ್ಲೂಕು ಸರ್ವೆಯರ್ ಆಗಿ ಕರ್ತವ್ಯ ನಿರ್ವಹಿಸಿರದಿದ್ದರೂ ಸಹ, 2007ನೇ ಸಾಲಿನಲ್ಲಿ ಸರ್ವೆಯರ್ ಆಗಿ ಪ್ರಭಾರ ವಹಿಸಿಕೊಂಡ ನಂತರ ಸರ್ವೆ ನಂ.213ರ 10 ಎಕರೆ 23 ಗುಂಟೆಯನ್ನು ಅಳತೆ ಮಾಡಿರುವುದನ್ನು ಒಪ್ಪಿರುತ್ತಾರೆ. ಅಲ್ಲದೇ, ಸರ್ವೆ ನಂ.213ರಲ್ಲಿ 'ಕೊರಕಲು' ಎಂದಿದೆ ಎನ್ನುವುದನ್ನು ಸಹ ಒಪ್ಪಿದ್ದಾರೆ ಹಾಗೂ 'ರಾಜಕಾಲುವೆ', 'ಕೊರಕಲು' 'ಬಿ' ಖರಾಬಿನಲ್ಲಿ ಬರುತ್ತವೆ ಎನ್ನುವುದನ್ನು ಒಪ್ಪಿರುತ್ತಾರೆ. ದೂರುದಾರರು ಹಾಜರುಪಡಿಸಿರುವ ಗ್ರಾಮ ನಕ್ಷೆಯಲ್ಲಿ ಸರ್ವೆ ನಂ.213ರಲ್ಲಿ 'ಕಾಲುದಾರಿ' ಇದೆ ಎನ್ನುವುದು ಕಂಡುಬರುತ್ತದೆ. ಈಗಾಗಲೇ ಮೇಲೆ ಗಮನಿಸಿದಂತೆ ಮಾನ್ಯ ಜಿಲ್ಲಾಧಿಕಾರಿಗಳು ಮಾಡಿದ ಭೂಪರಿವರ್ತನಾ ಆದೇಶದಲ್ಲಿ 'ಎ' ಖರಾಬ್ ವಿಸ್ತೀರ್ಣ 0.17ಗೆ ಮಾತ್ರ ಮಾರುಕಟ್ಟೆ ದರ ಹಾಗೂ ಪರಿವರ್ತನಾ ಶುಲ್ಕವನ್ನು ಪಾವತಿಸಿಕೊಳ್ಳಲಾಗಿದ್ದು, 'ಬಿ' ಖರಾಬನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ ಎಂದು ಸ್ಪಷ್ಟವಾಗಿರುತ್ತದೆ ('ಬಿ' ಖರಾಬಿನ ವಿಸ್ತೀರ್ಣವನ್ನು ಖಾಲಿ ಬಿಡಲಾಗಿದೆ). ಅಲ್ಲದೇ, ಜಿಲ್ಲಾಧಿಕಾರಿಗಳ ಆದೇಶದಲ್ಲಿ **ಈ 'ಬಿ' ಖರಾಬಿನ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ 'ಬಿ' ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲು ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರ್ ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು** ಎಂದಿದೆ. ಈ ಬಗ್ಗೆ ದೂರುದಾರರು ಸಹ ತಮ್ಮ ಪಾಟಿಸವಾಲಿನಲ್ಲಿ "ಸರ್ವೆ ನಂ.213 ಬಾಬ್ತು ದಿ:4–8–

1999ರಂದು ಜಿಲ್ಲಾಧಿಕಾರಿಗಳ ಆದೇಶದಂತೆ ಒಟ್ಟು 10ಎಕರೆ 23ಗುಂಟೆಗಳನ್ನು ಭೂ ಪರಿವರ್ತನೆ ಆದೇಶ ಮಾಡಿರುತ್ತಾರೆ ಈ ಬಗ್ಗೆ ಎನ್.ಕೆ ಸದಾಶಿವ ಆದ್ಯಾರವರು ಸೂಕ್ತ ಹಣವನ್ನು ಪಾವತಿ ಮಾಡಿರುತ್ತಾರೆ ಎಂದು ಮಾಡಿದ ಸಲಹೆಗೆ ಸಾಕ್ಷಿ, 10ಎಕರೆ 23ಗುಂಟೆಗೆ ಭೂಪರಿವರ್ತನೆ ಆದೇಶ ಮಾಡಿರುತ್ತಾರೆ ಎನ್ನುವುದು ಸರಿ. **ಆದರೆ ಖರಾಬು ಜಾಗ 17ಗುಂಟೆಯನ್ನು ಐನು ಮಾಡಿಸಿರುತ್ತಾರೆ ಆದರೆ ರಾಜಕಾಲುವೆಯನ್ನು ಮಾಡಿಸಿರುವುದಿಲ್ಲ"** ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಜಿಲ್ಲಾಧಿಕಾರಿಗಳ ಮೇಲ್ಕಂಡ ಆದೇಶದಲ್ಲಿ 'ಬಿ' ಖರಾಬಿನ ವಿಸ್ತೀರ್ಣವನ್ನು ಖಾಲಿ ಬಿಡಲಾಗಿದೆ. ಜಿಲ್ಲಾಧಿಕಾರಿಗಳ ಆದೇಶದಲ್ಲಿ 'ಬಿ' ಖರಾಬನ್ನು ಆರ್.ಟಿ.ಸಿಯಲ್ಲಿ ನಮೂದಿಸತಕ್ಕದ್ದು ಎಂದಿದ್ದರೂ ಸಹ ಅಂತಹ ಯಾವುದೇ ಪಹಣಿ ಪತ್ರಿಕೆಯನ್ನು ಆ.ಸ.ನೌರವರು ಶಿಸ್ತು ಪ್ರಾಧಿಕಾರದ ಮುಂದೆ ಹಾಜರುಪಡಿಸಿರುವುದಿಲ್ಲ. ಹೀಗಾಗಿ, 'ಬಿ' ಖರಾಬಿನಲ್ಲಿ ಬರುವ ರಾಜಕಾಲುವೆಯನ್ನು, ಈ ಆ.ಸ.ನೌರವರು ತಾವು ತಹಶೀಲ್ದಾರರಿಗೆ ಕಳುಹಿಸಿದ ವರದಿಯಲ್ಲಿ ತೋರಿಸಿರುವುದಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. 'ಬಿ' ಖರಾಬಿನಲ್ಲಿ ಬರುವ ರಾಜಕಾಲುವೆಯನ್ನು ನಕ್ಷೆಯಲ್ಲಿ ತೋರಿಸದೆ ವರದಿಯನ್ನು ತಹಶೀಲ್ದಾರರಿಗೆ ನೀಡಿ, ನೆಲಮಂಗಲ ಯೋಜನಾ ಪ್ರಾಧಿಕಾರದಿಂದಲೂ ಸಹ ಅನುಮೋದನೆಯನ್ನು ಪಡೆಯಲು ಯಶಸ್ವಿಯಾಗಿರುತ್ತಾರೆ. ರಾಜಕಾಲುವೆಯನ್ನೂ ಸಹ ನಿವೇಶನಗಳೆಂದು ಮಾರಾಟ ಮಾಡಿ, ಅದರ ಮೇಲೆ ಮನೆಗಳನ್ನು ಕಟ್ಟಿಕೊಳ್ಳಲು (ಛಾಯಾಚಿತ್ರಗಳನ್ನು ಹಾಜರುಪಡಿಸಲಾಗಿದೆ) ಮತ್ತು ಮಳೆ ಬಂದಾಗ ಆ ಲೇಔಟ್‌ನಲ್ಲಿ ನೀರು ಹರಿಯಲು ಜಾಗವಿಲ್ಲದೆ ರಸ್ತೆಯಲ್ಲಿ ಹರಿದು ಮನೆಗಳಿಗೆ ನುಗ್ಗಲು ಮೂಲ ಕಾರಣಕರ್ತರಾಗಿರುತ್ತಾರೆ.

**20.ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌರವರ ವಿರುದ್ಧ ಆಪಾದಿಸಲಾದ ಆರೋಪವನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದ ಅಂಶ-1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

21. ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ಶಿಸ್ತು ಪ್ರಾಧಿಕಾರದವರು ಆಪಾದಿತ ಆ.ಸ.ನೌಕರ ಶ್ರೀ. ರಾಮಚಂದ್ರ, ಸರ್ವೇಯರ್, ತಾಲ್ಲೂಕು ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ಶಿಸ್ತುಪ್ರಾಧಿಕಾರವು ಸೂಕ್ತ ಸಾಕ್ಷ್ಯಾಧಾರಗಳನ್ನು ನೀಡಿ ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

ಆ.ಸ.ನೌರವರ ನಿವೃತ್ತಿ ದಿನಾಂಕ: 28/02/2032 ಆಗಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

26/3/21

(ಕೆ.ಭಾಗ್ಯ)
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. N.G Nagaraju S/o Gangaiah, Nelamangala. |
| | **PW-2** | Smt. N.H Suma S/o N Hanumappa, Joint Director, Rural & Urban Development Department, Urban Development Authority, Tumkur. |
| 2 | **Documents marked on behalf of the Disciplinary Authority Ex.P-1 to Ex.P-9** | |
| | **Ex.P.1** | Complaint given by the complainant to this institution dtd: 21/03/2017. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | Documents pertaining to Ex.P.1. |
| | **Ex.P.5** | Photographs. |
| | **Ex.P.6** | Letter dtd: 14/12/2018 addressed to complainant. |
| | **Ex.P.7** | Pahani. |
| | **Ex.P.8** | Sketch Map. |
| | **Ex.P.9& 9(a)** | Report dtd: 12/05/2017 submitted by Smt. H.M Suma, Rural & Urban Development, Joint Director & Member-Secretary, Nelamangala Development Authority, Nelamangala with Signature. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Ramachandraiah B.M S/o Mayanna, Taluk Supervisor, DDLR Office, Devanahalli Taluk, Bengaluru Rural District. |
| 4 | **Documents marked on behalf of the DGOs through the** | |

| | | |
|---|---|---|
| | **complainant** | |
| | **Ex.D.1** | Letter dtd: 23/12/2015 addressed by Tahasildar, Nelamangala Taluk. |
| | **Ex.D.2** | Official Memorandum. |
| | **Ex.D.3** | Sketch Map. |
| | **Ex.D.4** | Receipt. |

Dated this the 26th March, 2021.

26/3/21

**(K.BHAGYA)**
Additional Registrar Enquiries-14,
Karnataka Lokayukta,
Bangalore.